

## ಸಾಂಪ್ರದಾಯಿಕ ಕಬ್ಬಿನ ಹಾಲಿನ ಸ್ವಾದ

ಶನಿ ಶಿಂಗಣಾಪುರಕ್ಕೆ ಹೋಗುವಾಗ ದಾರಿಯುದ್ದಕ್ಕೂ ಅಕ್ಕಪಕ್ಕ ಎಲ್ಲೇ ನೋಡಿದರೂ ಕಬ್ಬಿನ ಬೆಳೆಯೇ ಹೆಚ್ಚಾಗಿ ಕಂಡುಬರುವುದು. ರಸ್ತೆಯ ಪಕ್ಕ ಒಂಟೆತ್ತಿನ ಕಬ್ಬು ಹಿಂಡುವ ಮರದ ಗಾಣಗಳೂ ಗೋಚರಿಸುವವು. ಪ್ರವಾಸಿಗರಿಗೆ ತಾಜಾ ಕಬ್ಬಿನ ಹಾಲನ್ನು ಅವರ ಎದುರೇ ಎತ್ತಿನ ಮೂಲಕ ಮರದ ಗಾಣ ತಿರುಗಿಸಿ ಒಂದೊಂದೇ ಕಬ್ಬನ್ನು ಹಿಂಡಿ ಸಾಂಪ್ರದಾಯಿಕವಾಗಿ ಕಬ್ಬಿನ ಹಾಲು ತಯಾರಿಸಿಕೊಡುತ್ತಾರೆ. ಒಂಟಿ ಎತ್ತು ಯಜಮಾನನ ಬಾಯಿ ಮಾತಿನ ಅಪ್ಪಣೆಗೆ ಪುಟ್ಟ ವರ್ತುಲವನ್ನು ತಿರುಗಲು ಪ್ರಾರಂಭಿಸುತ್ತದೆ. ಕಬ್ಬು ಅರೆದು ಮುಗಿದೊಡನೆ ಅಲ್ಲೇ ಮಲಗಿ ವಿಶ್ರಾಂತಿ ಪಡೆಯುತ್ತದೆ.

ಈಗ ಎಲ್ಲ ಕಡೆ ಯಾಂತ್ರಿಕ ಗಾಣ ಬಂದರೂ ಇಲ್ಲಿ ಮಾತ್ರ ಒಂಟೆತ್ತಿನ ಮರದ ಗಾಣಗಳು ಕಂಡುಬರುತ್ತವೆ. ಹೀಗೆ ಕಬ್ಬಿನ ಹಾಲನ್ನ ತಯಾರಿಸಿ ಕಬ್ಬಿನ ಮೌಲ್ಯವರ್ಧನೆ ಮಾಡಿದ್ದಾರೆ. ಗಾಣದ ಪಕ್ಕ ವಿವಿಧ ರೀತಿಯ ಬೆಲ್ಲದ ಅಚ್ಚು, ಬೆಲ್ಲದ ಪೌಡರ್ ಮುಂತಾದ ಉತ್ಪನ್ನಗಳನ್ನೂ ಇಟ್ಟುಕೊಂಡು ಮಾರುತ್ತಾರೆ.

–ಗ.ಮ. ತುಂಬೇಮನೆ, ಶಿರಸಿ





## ಜಿಟಿ ಜಿಟಿ ಮಳೆಗೆ ಟಿಸಿಲೊಡೆದ ಅಣಬೆ

ಅರೆರೆ... ಇದೇನಿದು ಇದ್ದಕ್ಕಿದ್ದಂತೆ ಬೆಳ್ಗೊಡೆಗಳ ಸಾಲು ಎಂದು ಅಚ್ಚರಿ ಹುಟ್ಟಿಸಿತು. ಪ್ರಕೃತಿಯ ಪರಿಯೇ ಹಾಗೇ, ಎಲ್ಲಕ್ಕಿಂತ ತಾನು ಭಿನ್ನ ಎಂದು ತೋರಿಕೊಳ್ಳುತ್ತದೆ ಎಲ್ಲಕ್ಕಿಂತ ಭಿನ್ನ ಎಂಬುದನ್ನು ಸಾಬೀತು ಮಾಡುತ್ತಲೇ ಇರುತ್ತದೆ. ಹೌದು, ಜಿಟಿ ಜಿಟಿ ಮಳೆಯ ನಡುವೆ ಒಂದು ಬೆಳಗಾಗುವುದರೊಳಗೆ ಧರೆಗೆ ಸಾವಿರ ಸಾವಿರ ಸಂಖ್ಯೆಯಲ್ಲಿ ಬಿಳಿಯ ಕಿರು ಅಣಬೆಗಳು ಅಂಗಡಿಯಲ್ಲಿ ಜೋಡಿಸಿಟ್ಟ ಕೊಡೆಗಳಿಗೆ ಸೆಡ್ಡು ಹೊಡೆಯುವ ರೀತಿಯಲ್ಲಿ ಅರಳಿ ನಿಂತಿದ್ದು ಕೌತುಕ ಮೂಡಿಸಿದೆ.

ಅವುಗಳನ್ನೇ ನೋಡುತ್ತ ನಿಂತ ನನಗೆ ಬೆಳ್ಳಿಯ ಬೆಟ್ಟದ ನಡುವೆ ಕಳೆದು ಹೋದಂತೆ ಭಾಸವಾಯಿತು. ಪ್ರತಿ ವರ್ಷಕ್ಕೊಮ್ಮೆ ಇಂತಹ ವಿಸ್ಮಯದ ಮಹಲುಗಳಂತೆ ತೆರೆದುಕೊಳ್ಳುವ ಗಳಿಗೆ ಎದೆಯಲ್ಲಿ ಅವಿತಿರುವ ಭಾವಗಳಿಗೆ ಕುಡಿಯೊಡೆದಂತೆ ನವಿರಾಗುವ ಕ್ಷಣಗಳಿಗೆ ಸಾಕ್ಷಿಯಾಯಿತು.!

–ಸುಬ್ರಾಯ ಬಿದ್ರೆಮನೆ, ಯಲ್ಲಾಪುರ

## ಕಣ್ಮರೆಯಾಗುತ್ತಿರುವ ಉಣ್ಣೆ ಕಸೂತಿ

ಹಿಂದಿನ ಕಾಲದಲ್ಲಿ ಗೃಹಿಣಿಯರು ತಮ್ಮ ಬಿಡುವಿನ ಸಮಯದಲ್ಲಿ ಉಣ್ಣೆಯ ಕಸೂತಿಯಿಂದ ಬಾಗಿಲು ಪರದೆ, ಟೇಬಲ್ ಕ್ಲಾತ್, ದೇವಸ್ಥಾನಕ್ಕೆ ತೆಗೆದುಕೊಂಡು ಹೋಗುವ ಹರಿವಾಣದ ಮೇಲೆ ಮುಚ್ಚುವ ಹೊದಿಕೆ, ಅರಿಶಿನ ಕುಂಕುಮಕ್ಕೆ ಹೋಗಲು ಬೇಕಾಗುವ ವ್ಯಾನಿಟಿ ಬ್ಯಾಗ್ ತರಹದ ಚಿಕ್ಕ ಕೈಚೀಲವನ್ನು ಮತ್ತು ಲ್ಯಾಂಡ್‌ಲೈನ್ ಫೋನ್ ಮೇಲೆ ಹೊದಿಸುವ ಹೊದಿಕೆಯನ್ನು ತಯಾರಿಸಿ ಇಟ್ಟುಕೊಳ್ಳುತ್ತಿದ್ದರು.

ಗರ್ಭಿಣಿಯರು ಮುಂದೆ ತಮಗೆ ಹುಟ್ಟಲಿರುವ ಮಗುವಿಗಾಗಿ ಸ್ವೆಟರ್, ಕಾಲುಚೀಲ ಮತ್ತು ಕುಲಾವಿಯನ್ನು ಉಣ್ಣೆಯಿಂದ ಹೆಣೆದು ಮೊದಲೇ ಸಿದ್ಧಪಡಿಸಿ ಇಟ್ಟುಕೊಳ್ಳುತ್ತಿದ್ದರು. ಆದರೆ ಈಗ ಪ್ಲಾಸ್ಟಿಕ್‌ನಿಂದ ತಯಾರಿಸಿದ ತೋರಣಗಳು, ಬಾಗಿಲ ಪರದೆಗಳು ಮತ್ತು ಬಾಗಿಲಿಗೆ ನೇತು ಹಾಕುವ ಬಗೆ ಬಗೆಯ ಪ್ಲಾಸ್ಟಿಕ್ ಹಾರಗಳು ಮಾರುಕಟ್ಟೆಯಲ್ಲಿ ದೊರೆಯುತ್ತಿರುವುದರಿಂದ ಉಣ್ಣೆಯ ಕಸೂತಿಯ ಬಳಕೆ ಕಡಿಮೆಯಾಗುತ್ತಿದೆ.

–ಮುರಲೀಧರ ಕುಲಕರ್ಣಿ, ಬೀದರ್

